# ಕರ್ನಾಟಕದ ಸ್ವಾತಂತ್ರ್ಯ ಚಳುವಳಿಗೆ ವಿಜಾಪುರ ತಾಲೂಕಿನ ಸ್ವಾತಂತ್ರ್ಯ ಹೋರಾಟಗಾರರ ಪಾತ್ರ

**ಶ್ರೀಧರ ಚಿ. ಕಾಂಬಳೆ**

ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಜಿ.ಪಿ. ಪೋರವಾಲ ಕಲಾ, ವಾಣಿಜ್ಯ ಹಾಗೂ ವ್ಹಿ. ವ್ಹಿ. ಸಾಲಿಮಠ ವಿಜ್ಞಾನ ಮಹಾವಿದ್ಯಾಲಯ, ಸಿಂದಗಿ.

DOI: https://doi.org/10.5281/zenodo.17411830

## ABSTRACT:

ಈ ಲೇಖನವು ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯಲ್ಲಿ ವಿಜಾಪುರ (ಇಂದಿನ ವಿಜಯಪುರ) ತಾಲೂಕಿನ ಸ್ವಾತಂತ್ರ್ಯ ಹೋರಾಟಗಾರರ ಮಹತ್ವದ ಪಾತ್ರವನ್ನು ವಿಶ್ಲೇಷಿಸುತ್ತದೆ. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಡಳಿತದ ಆರಂಭದಿಂದಲೂ ಭಾರತೀಯರಲ್ಲಿ ಮೂಡಿದ ಅಸಮಾಧಾನವು 1857ರ ಸಂಗ್ರಾಮದ ಮೊದಲು 1824ರ ಸಿಂದಗಿಯ ಬಂಡಾಯ ಮತ್ತು 1857ರ ಹಲಗಲಿಯ ಬೇಡರ ದಂಗೆಗಳ ಮೂಲಕ ವಿಜಾಪುರದಲ್ಲಿ ಪ್ರಕಟಗೊಂಡಿತು.

ಶ್ರೀನಿವಾಸರಾವ್ ಕೌಜಲಗಿ (1873–1940), ಲೋಕಮಾನ್ಯ ತಿಲಕ್ ಮತ್ತು ಮಹಾತ್ಮ ಗಾಂಧಿಯವರ ನಿಕಟವರ್ತಿ, ವಕೀಲಿ ವೃತ್ತಿ ತ್ಯಜಿಸಿ ಸ್ವದೇಶಿ ಚಳುವಳಿ, ಅಸಹಕಾರ ಆಂದೋಲನ ಮತ್ತು ಹಿಂದುಸ್ತಾನಿ ಸೇವಾದಳದ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಮತ್ತೊಬ್ಬ ಪ್ರಮುಖ ನಾಯಕ ಚನ್ನಬಸಪ್ಪ ಜಗದೇವಪ್ಪ ಅಂಬಲಿ (1895–1962), 'ಕರ್ನಾಟಕದ ಸರದಾರ ಪಟೇಲ್' ಎಂದು ಗುರುತಿಸಲ್ಪಟ್ಟು, ಕಾಯ್ದೆ ಭಂಗ ಮತ್ತು ಚಲೇ ಜಾವ್ ಚಳುವಳಿಯಲ್ಲಿ ಕುಟುಂಬ ಸಮೇತ ಭಾಗವಹಿಸಿ ಬಂಧನಕ್ಕೊಳಗಾದರು. ಈ ಹೋರಾಟಗಾರರ ತ್ಯಾಗ ಮತ್ತು ಬಲಿದಾನಗಳಿಂದಾಗಿ ವಿಜಾಪುರ ತಾಲೂಕು ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ.

## KEYWORDS:

ಶ್ರೀನಿವಾಸರಾವ್ ಕೌಜಲಗಿ, ಚನ್ನಬಸಪ್ಪ ಅಂಬಲಿ, ವಿಜಾಪುರ ಸ್ವಾತಂತ್ರ್ಯ ಹೋರಾಟ, ಅಸಹಕಾರ ಚಳುವಳಿ, ಹಿಂದುಸ್ತಾನಿ ಸೇವಾದಳ.

## ಪ್ರಸ್ತಾವನೆ:

ಇತಿಹಾಸದ ಅಧ್ಯಯನದಿಂದ ಹಿಂದಿನಿಂದಲೂ ಭಾರತ ಬಾಹ್ಯ ಆಡಳಿತಗಾರರ ಆಡಳಿತಕ್ಕೆ ಒಳಗಾಗಿತ್ತು ಎಂದು ಹಲವಾರು ಉಲ್ಲೇಖಗಳಿಂದ ತಿಳಿದು ಬರುತ್ತದೆ. ಅರಬರ ಸಿಂಧ್ ಆಕ್ರಮಣದಿಂದ ಹಿಡಿದು ಹದಿನಾರನೇ ಶತಮಾನದಲ್ಲಿ ಪಾಶ್ಚಾತ್ಯರು ವ್ಯಾಪಾರ ವ್ಯವಹಾರಕ್ಕಾಗಿ ಭಾರತಕ್ಕೆ ಬರುವತನಕ ಮುಸ್ಲಿಂ ಅರಸರ ಪ್ರಾಬಲ್ಯ ಕಾಣುತ್ತೇವೆ. ಭಾರತದಲ್ಲಿನ ವಿಪುಲ ಸಂಪನ್ಮೂಲಗಳು, ಮಸಾಲೆ ಪದಾರ್ಥಗಳಿಂದ ಆಕರ್ಷಿತರಾಗಿ ವ್ಯಾಪಾರ ನಡೆಸುವ ಉದ್ದೇಶದಿಂದ ಆಗಮಿಸಿದ ಬ್ರಿಟಿಷರಿಗೆ ಸ್ಥಳಾವಕಾಶ ನೀಡಿದ್ದೇ ಮುಂದೆ ಭಾರತಕ್ಕೆ ಮುಳುವಾಯಿತು.

ಹೀಗೆ ಕ್ರಮೇಣವಾಗಿ ಒದಗಿಬಂದ ಸಮಯಾವಕಾಶವನ್ನು ಬಳಸಿ ಈಸ್ಟ್ ಇಂಡಿಯಾ ಕಂಪನಿ ಪ್ರಬಲ ಶಕ್ತಿಯಾಗಿ ಹೊರಹೊಮ್ಮಿ ಕ್ರಿ.ಶ. 1600 ರಿಂದ 1772ರ ಹೊತ್ತಿಗೆ ಭಾರತದಲ್ಲಿನ ಹೆಚ್ಚಿನ ಪ್ರದೇಶಗಳಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿತು. ಈಸ್ಟ್ ಇಂಡಿಯಾ ಕಂಪನಿಯ

ಆರ್ಥಿಕ ದಬ್ಬಾಳಿಕೆಯಿಂದ ಭಾರತದ ಸಂಪನ್ಮೂಲಗಳಲ್ಲಿ ಕಡಿತ ಉಂಟಾಗತೊಡಗಿತು, ಬ್ರಿಟಿಷರು ಕ್ರಮೇಣ ಭಾರತೀಯ ಸಂಸ್ಥಾನಗಳನ್ನು ವಶಪಡಿಸಿಕೊಂಡು ತಮ್ಮ ಪ್ರಭುತ್ವ ವಿಸ್ತರಿಸುತ್ತಾ ಹೋದಂತೆ ಭಾರತೀಯರಲ್ಲಿ ಅತೃಪ್ತಿ, ಅಸಮಾಧಾನ ನೆಲೆಯೂರ ತೊಡಗಿತು, ಇದರ ಪ್ರತಿಫಲವೇ 1763 ರಿಂದ 1857 ರ ಹಾದಿಯಲ್ಲಿ 40 ಕ್ಕೂ ಮೀರಿದ ಪ್ರಮುಖ ದಂಗೆಗಳು ಹಾಗೂ 100 ಕ್ಕೂ ಅಧಿಕ ಸಂಖ್ಯೆಯ ಸಣ್ಣ ಪುಟ್ಟ ದಂಗೆಗಳು ಸಾಕ್ಷಿಯಾಗಿವೆ. ದೇಶದ ಎಲ್ಲೆಡೆ ಬ್ರಿಟಿಷ್ ಆಡಳಿತದ ವಿರುದ್ಧ ಅತೃಪ್ತಿ ಆಕ್ರೋಶ ತಲೆ ಎತ್ತತೊಡಗಿದವು, ಇಂತಹ ಅತೃಪ್ತಿ ಆಕ್ರೋಶಗಳಿಂದ, ವಿಜಾಪುರ ಜಿಲ್ಲೆ ಮತ್ತು ತಾಲೂಕು ಹೊರತಾಗಿರಲಿಲ್ಲ.

**ವಿಜಾಪುರ ತಾಲೂಕಿನಲ್ಲಿ ಸ್ವಾತಂತ್ರ್ಯ ಚಳುವಳಿ ಮತ್ತು ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರು:**

ಭಾರತದ ಸ್ವಾತಂತ್ರ್ಯವು ದೇಶದ ಪ್ರತಿಯೊಂದು ಗ್ರಾಮ, ತಾಲೂಕು ಜಿಲ್ಲೆ ಮತ್ತು ರಾಜ್ಯಗಳ ಹೋರಾಟದ ಒಟ್ಟಾರೆ ಪ್ರತಿಫಲವಾಗಿದೆ. ಈ ನಿಟ್ಟಿನಲ್ಲಿ ವಿಜಾಪುರ ತಾಲೂಕಿನ ವ್ಯಕ್ತಿಗಳು ಗ್ರಾಮಗಳೂ ಸ್ವಾತಂತ್ರ್ಯ ಚಳುವಳಿಗೆ ಅತೀ ಹೆಚ್ಚಿನ ಸೇವೆ ಸಲ್ಲಿಸಿದ್ದಾರೆ. ಆದ್ದರಿಂದ ಸಮಗ್ರ ವಿಜಾಪುರ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ತನ್ನದೇ ಆದ ಪಾತ್ರವಹಿಸುವ ಮೂಲಕ ಮಹತ್ವದ ಸ್ಥಾನಗಳಿಸಿಕೊಂಡಿದೆ.

1857 ರಿಂದ 1947 ರ ವರೆಗಿನ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಪ್ರತ್ಯೇಕವಾಗಿ ವಿಜಾಪುರ ತಾಲೂಕಿನಲ್ಲಿ ಸ್ಮರಣೀಯವಾದುದಾಗಿದೆ. 1857 ರ ಭಾರತದ ಪ್ರಥಮ ಸಂಗ್ರಾಮಕ್ಕಿಂತ ಮುಂಚೆಯೇ ವಿಜಾಪುರ ಜಿಲ್ಲೆಯಲ್ಲಿ ಸ್ವಾತಂತ್ರ್ಯದ ಅನೇಕ ಕಿಡಿಗಳು ಸಂಬಂಧಿಸಿದ್ದು ಅವುಗಳಲ್ಲಿ 1824 ರ ಸಿಂದಗಿಯ ಬಂಡಾಯ, 1841 ರ ಬಾದಾಮಿಯ ಕ್ರಾಂತಿ, 1857 ರ ಹಲಗಲಿಯ ಬೇಡರ ದಂಗೆಗಳು ಪ್ರಮುಖವಾಗಿವೆ.

ಸ್ವಾತಂತ್ರ್ಯ ಚಳುವಳಿಗೆ ವಿಜಾಪುರ ತಾಲೂಕಿನಿಂದ ವೈಯಕ್ತಿಕವಾಗಿ ಅನೇಕ ವ್ಯಕ್ತಿಗಳು ತಮ್ಮದೇ ಆದ ಮಹತ್ವದ ಪಾತ್ರವನ್ನು ವಹಿಸುವ ಮೂಲಕ ಇಂದಿಗೂ ಕೂಡಾ ಚಿರಸ್ಮರಣೀಯರಾಗಿದ್ದಾರೆ. ಅಂಥವರಲ್ಲಿ ಮಹಾತ್ಮಗಾಂಧಿ ಮತ್ತು ಟಿಳಕರ ನಿಕಟವರ್ತಿಯಾಗಿದ್ದ ಶ್ರೀನಿವಾಸರಾವ್ ಕೌಜಲಗಿ, ಕಾಕಾ ಕಾರಖಾನೀಸ, ಹಣಮಂತರಾವ ಕೌಜಲಗಿ, ಮೊಹರೆ ಹಣಮಂತರಾಯ, ಚನ್ನಬಸಪ್ಪ ಅಂಬಳಿ ಇನ್ನೂ ಮುಂತಾದವರು ಪ್ರಮುಖರಾಗಿದ್ದಾರೆ.

**ಶ್ರೀನಿವಾಸರಾವ್ ಕೌಜಲಗಿ (1873–1940):**

ಐತಿಹಾಸಿಕ ನಗರ ವಿಜಾಪುರದಲ್ಲೇ ಕೌಜಲಗಿ ಶ್ರೀನಿವಾಸ ರಾಯರು ಬಾಳಿ ಬದುಕಿದ್ದು ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಬ್ರಿಟಿಷ್ ಪ್ರಭುತ್ವದಿಂದ ಭಾರತ ಮಾತೆಯನ್ನು ಬಂಧಮುಕ್ತಗೊಳಿಸುವಗೋಸ್ಕರ ಆಮರಣಾಂತ ತಮ್ಮ ಅಸಂಖ್ಯ ಸಂಗಡಿಗರೊಂದಿಗೆ ಹೋರಾಡಿ, ಸೆರೆಮನೆವಾಸ ಅನುಭವಿಸಿದರು. ಇಂಗ್ಲೀಷರು ಕೊಡುತ್ತಿದ್ದ ಶಿಕ್ಷೆಗಳನ್ನೆಲ್ಲ ಸಹಿಸಿ ನ್ಯಾಯದಿಂದ ಹೋರಾಡಿ, ತ್ಯಾಗ ಬಲಿದಾನ ಗೈದು ಅಮರರಾದರು ಎಂದು ಜನತೆ ಗೌರವಿಸುತ್ತಿತ್ತು, ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಒಂದು ಚಿಕ್ಕ ಗ್ರಾಮ ಕೌಜಲಗಿ, ಇದೇ ಗ್ರಾಮದಿಂದ ಇವರ ಪೂರ್ವಜರು ಬಂದವರಾಗಿದ್ದರಿಂದ ಈ ಮನೆತನದ ಹೆಸರು ಕೌಜಲಗಿಯಾಯಿತು.

ಅಂದಿನ ಜಿಲ್ಲಾ ಕೇಂದ್ರವಾದ ಕಲಾದಗಿಯಲ್ಲಿ ಖ್ಯಾತ ವಕೀಲರಾದ ವೆಂಕಟರಾಯರ ಮಗನಾಗಿ 16071873 ರಲ್ಲಿ ಶ್ರೀನಿವಾಸ ರಾವ್ ಕೌಜಲಗಿಯವರು ಜನಿಸಿದರು. ತುಳಸಿಗೇರಪ್ಪ ತಿರುಪತಿ ಶ್ರೀನಿವಾಸ ಎಂದು ಕರೆಯುತ್ತಿದ್ದರು. ಕೊನೆಯಲ್ಲಿ ಶ್ರೀನಿವಾಸ ಎಂಬ ಹೆಸರು ಶಾಲೆಯಲ್ಲಿ ದಾಖಲಾಯಿತು. ಮುಂಬೈ ಪ್ರಾಂತದಲ್ಲಿದ್ದ ಈ ಭಾಗವೆಲ್ಲಾ ಮರಾಠಿಮಯ,

ಮರಾಠಿಯೇ ಆಡುಭಾಷೆ, ರಾಜ್ಯಭಾಷೆಯಾಗಿತ್ತು. ಹೀಗಾಗಿ ಶ್ರೀನಿವಾಸರಾಯರ ಪ್ರಾಥಮಿಕ ಶಿಕ್ಷಣವೆಲ್ಲಾ ಮರಾಠಿಯಲ್ಲೇ ನಡೆಯಿತು. ತುಂಟರಾಗಿದ್ದ ಇವರು ಧೈರ್ಯವಂತರೂ, ತೀಕ್ಷ್ಣ ಮತಿಯಾಗಿದ್ದರು.

ಶ್ರೀನಿವಾಸ ರಾಯರ ಹೈಸ್ಕೂಲ ವಿದ್ಯಾಭ್ಯಾಸವೆಲ್ಲಾ ವಿಜಾಪುರದಲ್ಲಿ ಆಯಿತು. ಆಟ ಪಾಟುಗಳಲ್ಲಿ ಮಗ್ನರಾಗುತ್ತಿದ್ದರು. ಶಾಲೆಯಲ್ಲಿ ಅಷ್ಟೊಂದು ಜಾಣನಲ್ಲದಿದ್ದರೂ ಕುಶಾಗ್ರಮತಿಯಾಗಿದ್ದರು. ಮನಗೊಟ್ಟು ಅಭ್ಯಾಸ ಮಾಡದೆ ಯಾವಾಗಲೂ ಉತ್ಸವ, ಸಾರ್ವಜನಿಕ ಸೇವೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಸದಾ ಚಟುವಟಿಕೆಯ ವ್ಯಕ್ತಿಯಾಗಿದ್ದರು.

ಮುಂದೆ ಕಾಲೇಜು ಶಿಕ್ಷಣಕ್ಕಾಗಿ ಅಂದಿನ ವಿದ್ಯಾ ಕೇಂದ್ರ ಪುಣೆ ಸೇರಿದರು. ಡೆಕ್ಕನ್ ಕಾಲೇಜ್ ರಾಷ್ಟ್ರೀಯ ಸ್ಫೂರ್ತಿಯ ದೀಕ್ಷಾ ಕೇಂದ್ರವಾಗಿತ್ತು, ಹೀಗಾಗಿ ಸಹಜವಾಗಿ ಶ್ರೀನಿವಾಸ ರಾಯರು ರಾಷ್ಟ್ರಭಕ್ತಿ, ರಾಷ್ಟ್ರಪ್ರೇಮ, ದಾಸ್ಯವಿಮೋಚನೆಗಳನ್ನು ಕುರಿತೇ ಸಮಾಲೋಚಿಸುತ್ತಿದ್ದರು. ದೇಶ ಸೇವೆಗೆ ಮುಖ್ಯವಾಗಿ ಆರೋಗ್ಯ ಸಂಪತ್ತು ಅವಶ್ಯ ಎಂದು ಪ್ರತಿಪಾದಿಸುತ್ತಾ ಅವರು ತಪ್ಪದೇ ತಮ್ಮ ಸಂಗಡಿಗರೊಡನೆ ಯೋಗ, ವ್ಯಾಯಾಮ, ಕುಸ್ತಿ ಆಡುತ್ತಿದ್ದರು. ದೇಹಬಲ ವೃದ್ಧಿಸಿದಂತೆ ಮನೋಬಲವೂ ಬೆಳೆಯುತ್ತಿತ್ತು,

ಪುಣೆಯ ಅನೇಕ ಸಮಾರಂಭಗಳಲ್ಲಿ ಲೋಕಮಾನ್ಯ ಟಿಳಕರ ಭಾಷಣವನ್ನು ಆಲಿಸುತ್ತಿದ್ದರು. ಅದರ ಪ್ರಭಾವ ಇವರ ಮೇಲಾಗಿ ಟಿಳಕರ ಅನುಯಾಯಿಯಾದರು. ಕಾಲೇಜು ವ್ಯಾಸಂಗ ಬಿಡದೇ ನಡೆಸಿದ್ದರೂ ಮನಗೊಟ್ಟು ಓದುತ್ತಿರಲಿಲ್ಲ, ಬಿಡುವಿದ್ದಾಗ ಒಂದು ವರ್ಗದಲ್ಲಿ ಪ್ರಾಧ್ಯಾಪಕರು ಹೇಳಿದ್ದಷ್ಟೇ, ಆಗ ಕೇಳಿದ ಜ್ಞಾಪಕ ಶಕ್ತಿಯಿಂದಲೇ ಪರೀಕ್ಷೆಯನ್ನು ಬರೆಯುತ್ತಿದ್ದರು. 1895 ರಲ್ಲಿ ಬಿ.ಎ. ಪಾಸಾದರು. ಮುಂದೆ ಕಾಯ್ದೆ ಪರೀಕ್ಷೆಯನ್ನು ಅಭ್ಯಸಿಸಿ ಅದರಲ್ಲಿಯೂ ತೇರ್ಗಡೆಹೊಂದಿದರು. 1897 ರಲ್ಲಿ ಶ್ರೀನಿವಾಸರಾಯರು ವಕೀಲರಾಗಿ ವಿಜಾಪುರಕ್ಕೆ ಆಗಮಿಸಿದರು. ವಿದ್ಯಾರ್ಥಿಯಾಗಿದ್ದಾಗಲೇ ಟಿಳಕರ ಪ್ರಭಾವದಿಂದ ರಾಜಕೀಯಕ್ಕೆ ಧುಮುಕಿದರು.

ತರುಣರಾದ ವಕೀಲ ಶ್ರೀನಿವಾಸರಾಯರು 1897 ರಲ್ಲಿ ಸನ್ನದು ಪಡೆದು ವಿಜಾಪುರದಲ್ಲಿ ತಮ್ಮ ವಕೀಲ ವೃತ್ತಿ ಪ್ರಾರಂಭಿಸಿದರು. ವಿಜಾಪುರದಲ್ಲಿದ್ದಾಗ ಕೆಂಭಾವಿ ರಾಘವೇಂದ್ರ ರಾಯರು ಹಾಗೂ ದೇಸಾಯಿ ಪಾಂಡುರಂಗ ರಾಯರು ಸುಪ್ರಸಿದ್ಧ ವಕೀಲರು ಅನುಭವಿಗಳು ಇವರೀರ್ವರಿಗೂ ಸಮನಾಗಿ ಶೀಘ್ರದಲ್ಲೇ ಶ್ರೀನಿವಾಸರಾಯರು ಖ್ಯಾತಿ ಹೊಂದಿದರು. 1922 ರಲ್ಲಿ ವಿವಾದಾತ್ಮಕ ಕೇಸೊಂದರಲ್ಲಿ ಜಯಭೇರಿ ಬಾರಿಸಿದರು. ಅತ್ಯಂತ ಕಠಿಣ ಸಂದರ್ಭದಲ್ಲೂ ಅವರು ಜಯಗಳಿಸಿದಾಗ ಅಂದೇ 'ಕರ್ನಾಟಕ ಭೂಷಣ ಶ್ರೀನಿವಾಸ ರಾವ್ ಕೌಜಲಗಿ ಸಂಕ್ಷಿಪ್ತ ಚರಿತೆ ಮತ್ತು ಖಟ್ಲೆಯ ಸಂಬಂಧ ವೃತ್ತಾಂತವು' ಎಂಬ ಪುಸ್ತಕವು ಪ್ರಕಟಗೊಂಡಿತು.

ಅಸಹಕಾರ ಆಂದೋಲನಕ್ಕೆ ಗಾಂಧಿಜಿಯವರು ಕರೆಕೊಟ್ಟಾಗ ಕರ್ನಾಟಕದಲ್ಲೂ ಚಳುವಳಿ ಪ್ರಾರಂಭವಾಯಿತು. ಸ್ವಾತಂತ್ರ್ಯದ ಕಾವು ಎಲ್ಲಡೆ ಹೆಚ್ಚಿತು. ಜನತೆ, ನ್ಯಾಯಾಲಯ, ಕಛೇರಿ, ಶಾಲೆ ಕಾಲೇಜು ಬಹಿಷ್ಕರಿಸಿ ಚಳುವಳಿಯಲ್ಲಿ ಧುಮುಕಿದರು. ರಾಷ್ಟ್ರೀಯ ಸೇವೆಯಲ್ಲಿ ನಿರತರಾಗಿದ್ದ ಇವರು ವಕೀಲಿ ವೃತ್ತಿಗೆ ತಿಲಾಂಜಲಿ ಇಟ್ಟು ದೇಶ ಸೇವೆಗೆ ಕಂಕಣ ಬದ್ಧರಾದರು. ಮುಂಬೈ ಕರ್ನಾಟಕದಲ್ಲಿ ರಾಷ್ಟ್ರೀಯತೆಯ ನಿಜವಾದ ಹರಿಕಾರರು ಲೋಕಮಾನ್ಯ ಟಿಳಕರು ಹಾಗೂ ಅವರ ಕೇಸರಿ ಪತ್ರಿಕೆ. ಶ್ರೀನಿವಾಸರಾಯರಂತೂ ವಿದ್ಯಾರ್ಥಿ ದೆಸೆಯಿಂದಲೇ ಟಿಳಕರ ಕಟ್ಟಾ ಅನುಯಾಯಿಗಳು. ಲೋಕಮಾನ್ಯರಾದ ಅವರ ಕಾರ್ಯಕ್ರಮ ಎಲ್ಲೇ ಇರಲಿ ತಪ್ಪದೆ

ಭಾಗವಹಿಸುತ್ತಿದ್ದರು.

1898 ಫೆಬ್ರುವರಿ 19 ರಂದು ನಡೆದ ಮ್ಯುನಿಸಿಪಲ್ ಇಲೆಕ್ಷನ್‌ನಲ್ಲಿ ಜನರ ವತಿಯಿಂದ ಚುನಾಯಿಸಲ್ಪಟ್ಟು ವಾರ್ಡ್ ನಂಬರ್4 ರಿಂದ ಆರಿಸಿ ಬಂದರು. ಹೀಗೆ ಪ್ರಥಮವಾಗಿ ಸಾರ್ವಜನಿಕ ಸೇವಾ ಜೀವನ ಪ್ರಾರಂಭಿಸಿದರು. ಮುಂದಿನ ವರ್ಷಗಳಲ್ಲಿ ಮ್ಯುನಿಸಿಪಲ್ ಪ್ರಸಿಡೆಂಟರಾದರು. ನಗರದ ಉನ್ನತಿ, ಸ್ವಚ್ಛತೆಗಾಗಿ ಪರಿಶ್ರಮಿಸಿದರು. ಸ್ವದೇಶಿ ಚಳುವಳಿ ರಾಷ್ಟ್ರಾದ್ಯಂತ ಹಬ್ಬಿತು. ವಿದೇಶಿ ವಸ್ತುಗಳ ಬಹಿಷ್ಕಾರ ಹೋಳಿಗಳು ನಡೆದವು. ವಿಜಾಪುರದಲ್ಲೂ 1905 ರ ಡಿಸೆಂಬರ್ 2 ರಂದು ಜಾಹೀರು ಸಭೆಯು ಸ್ವದೇಶಿ ಚಳವಳಿಯ ನಿಮಿತ್ತವಾಗಿ ಕೂಡಿತ್ತು. ಸಭೆಗೆ ಸುಮಾರು 500 ಜನ ಕೂಡಿದ್ದರು. ಇದರ ಅಧ್ಯಕ್ಷತೆಯನ್ನು ಪ್ರಸಿದ್ಧ ಹಿರಿಯ ವಕೀಲರಾದ ಪಾಂಡುರಂಗರಾವ್ ದೇಸಾಯಿಯವರು ವಹಿಸಿದ್ದರು. ನಾವೆಲ್ಲರೂ ಆದಷ್ಟು ಮಟ್ಟಿಗೆ ಸ್ವದೇಶಿ ವಸ್ತುಗಳನ್ನು ಉಪಯೋಗಿಸುವ ದೃಢ ನಿಶ್ಚಯವನ್ನು ಮಾಡಿ ಅದರಂತೆಯೇ ವರ್ತಿಸತಕ್ಕದ್ದು ಎಂಬ ಠರಾವನ್ನು ವಕೀಲ ಶ್ರೀನಿವಾಸರಾವ್ ಕೌಜಲಗಿಯವರು ಸಭೆಯ ಮುಂದಿರಿಸಿದರು. ಅಲ್ಲದೇ ಸ್ವದೇಶಿ ಚಳುವಳಿಯ ಉದ್ದೇಶವನ್ನು ಅದರ ಅವಶ್ಯಕತೆಯನ್ನು ಗಂಭೀರವಾಗಿ, ಹೃದಯವಿದ್ರಾವಕವಾಗಿ ವರ್ಣಿಸಿದರು.

ವಂಗಭಂಗ ವಿಭಜನೆಯ ಪರಿಣಾಮವು ಕರ್ನಾಟಕದಲ್ಲೂ ಪ್ರತಿಕ್ರಿಯೆ ಉಂಟಾದವು. ಎಲ್ಲೆಡೆಯಲ್ಲೂ ಸಾರ್ವಜನಿಕ ಸಭೆ ಸೇರಿ ವಿರೋಧ ವ್ಯಕ್ತಗೊಂಡವು. ಶ್ರೀನಿವಾಸ ರಾಯರು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸದಸ್ಯ, ಉಪಾಧ್ಯಕ್ಷ ಅಲ್ಲದೇ ಅಧ್ಯಕ್ಷರಾಗಿಯೂ ಅಮೋಘ ಕಾರ್ಯ ಕೈಗೊಂಡರು. 1907 ರ ಸೂರತ್ ಕಾಂಗ್ರೆಸ್ ಅಧಿವೇಶನದಲ್ಲಿ ಕರ್ನಾಟಕದ ಧುರೀಣರಾದ ಶ್ರೀನಿವಾಸರಾವ ಕೌಜಲಗಿಯವರು, ಧಾರವಾಡದ ವೆಂಕಟರಾಯರು, ಅಣ್ಣಾಚಾರ್ಯ ಹೊಸಕೇರಿ, ಬೆಳಗಾವಿಯ ಗೋವಿಂದರಾವ್ ಯಾಳಗಿ ಹಾಗೂ ಗಂಗಾಧರ ರಾವ್ ದೇಶಪಾಂಡೆಯವರು ಭಾಗವಹಿಸಿದ್ದರು. ವಿಜಾಪುರ ಕನ್ನಡ ಪತ್ರಿಕೆ ಕರ್ನಾಟಕ ವೈಭವ, ಮರಾಠಿಯ ಕೇಸರಿ, ಚಿತ್ರಮಯ ಜಗತ್, ಜ್ಞಾನ ಪ್ರಕಾಶ ಇತ್ಯಾದಿ ಪತ್ರಿಕೆಗಳು ರಾಷ್ಟ್ರೀಯತೆಯ ಸಂದೇಶಗಳನ್ನು ಪ್ರಕಟಪಡಿಸುತ್ತಲಿದ್ದವು.

ಟಿಳಕರು ಮೇಲಿಂದ ಮೇಲೆ ಶ್ರೀನಿವಾಸರಾಯರೊಂದಿಗೆ ಮುಂಬೈ ಕರ್ನಾಟಕದ ಪ್ರವಾಸ ಕೈಗೊಂಡರು. ರಾಷ್ಟ್ರೀಯ ಜಾಗೃತಿಯನ್ನುಂಟು ಮಾಡಿದರು. ಹೋಮ್ ರೂಲ್ ಲೀಗ್ ನ್ನು ಪ್ರಾರಂಭಿಸಿದಾಗ ಇದರ ಉದ್ದೇಶಕ್ಕಾಗಿಯೇ ಬೆಳಗಾವಿ, ಸಂಕೇಶ್ವರ ಮತ್ತಿತರ ಸ್ಥಳಗಳಿಗೆ ಭೇಟಿಯಿತ್ತು ಲೀಗ್ ಶಾಖೆಗಳನ್ನು ಪ್ರಾರಂಭಿಸಿದರು. ಶ್ರೀನಿವಾಸರಾಯರ ಹಸ್ತದಿಂದಲೇ ಬೆಳಗಾವಿ ಶಾಖೆ ಪ್ರಾರಂಭಗೊಂಡಿತು. ಮುಂಬೈ ರಾಜ್ಯದ ರಾಜಕೀಯ ಸಮ್ಮೇಳನವನ್ನು 1916 ರಲ್ಲಿ ಬೆಳಗಾವಿಯಲ್ಲೂ ಹಾಗೂ 1918 ರಲ್ಲಿ ವಿಜಾಪುರದಲ್ಲಿಯೂ ಕರೆದರು. ಈ ಎರಡೂ ಅಧಿವೇಶನಗಳಲ್ಲಿ ಗಾಂಧಿಜಿಯವರು ಉಪಸ್ಥಿತರಿದ್ದರು. ಅವರೊಡನೆ ಕೇಳಕರ್ ಪರಾಂಜಪೆ, ವಿಠ್ಠಲ ಭಾಯಿ ಪಟೇಲ್, ಸರೋಜಿನಿ ನಾಯ್ಡು ಮುಂತಾದ ರಾಷ್ಟ್ರ ನಾಯಕರು ಆಗಮಿಸಿದ್ದರು. ಕಾಂಗ್ರೆಸ್ ನಿಷ್ಠಾವಂತ ಕಾರ್ಯಕರ್ತರಾಗಿದ್ದ ಶ್ರೀನಿವಾಸರಾಯರೇ ಈ ಪರಿಷತ್ತಿನ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಟಿಳಕರ ನಿಧನಾನಂತರ ಗಾಂಧೀಜಿಯವರನ್ನು ಶ್ರೀನಿವಾಸರಾಯರು ನಿಷ್ಠೆಯಿಂದಲೇ ಹಿಂಬಾಲಿಸಿದರು. ರಾಷ್ಟ್ರೀಯತೆ, ಜಾಗೃತಿ ಹಾಗೂ ಕಾಂಗ್ರೆಸ್ ಪ್ರಭಾವಕ್ಕಾಗಿ ಗಾಂಧಿಜಿಯವರು 1920 ಹಾಗೂ 1921 ರಲ್ಲಿ ಕರ್ನಾಟಕದಲ್ಲಿ ಪ್ರವಾಸ ಕೈಗೊಂಡರು. ಅವರ ಜೊತೆಯಲ್ಲಿ ಶೌಕತ್ ಆಲಿ, ಮಹಮ್ಮದ ಆಲಿ ಬಂಧುಗಳಿದ್ದರು. ಖಿಲಾಫತ್ ಚಳುವಳಿಯಿಂದ ಮುಸ್ಲಿಮರು ಬಹುಸಂಖ್ಯೆಯಲ್ಲಿ ಕಾಂಗ್ರೆಸ್ಸನ್ನು ಸೇರಿದರು.

ಕರ್ನಾಟಕದಲ್ಲಿ ಅಸಹಕಾರ ಚಳುವಳಿ ಸ್ವಾತಂತ್ರ್ಯದ ಬೇಡಿಕೆಯು ಎಲ್ಲೆಡೆಯೂ ಹರಡಿತ್ತು. ನ್ಯಾಯಾಲಯ, ಕಛೇರಿ, ಶಾಲೆ, ಕಾಲೇಜುಗಳನ್ನು ಬಹಿಷ್ಕರಿಸಲು ಗಾಂಧಿಜಿಯವರು ಕರೆನೀಡಿದರು ವಿಜಾಪುರದ ಶ್ರೀನಿವಾಸರಾವ್ ಕೌಜಲಗಿ, ಜಯರಾವ್ ದೇಶಪಾಂಡೆ, ರಂಗರಾವ್ ತಿಳಿಗೋಳ, ಹಣಮಂತರಾವ್ ಕೌಜಲಗಿ, ರಾಘವೇಂದ್ರರಾವ್ ದೇಸಾಯಿ ಮುಂತಾದವರು ವಕೀಲಿ ವೃತ್ತಿಯನ್ನು ತ್ಯಜಿಸಿದರು. ಸರಕಾರಕ್ಕೆ ಧಿಕ್ಕಾರ ಘೋಷಣೆಗಳು ಮೊಳಗಿದವು. ಕೂಡಲೇ ಸರಕಾರ ಇವರನ್ನೆಲ್ಲ ಬಂಧಿಸಿ ಯರವಾಡ ಜೈಲಿಗೆ ಕಳಿಸಿತು. ಒಂದು ವರ್ಷದ ಕಾರಾಗೃಹ ವಾಸದ ಶಿಕ್ಷೆಯಾಯಿತು. ಮುಂದೆ ಯರವಾಡ ಜೈಲಿನಿಂದ ಶ್ರೀನಿವಾಸರಾಯರು 24 ನೆಯ ಆಗಸ್ಟ್ 1923 ರಂದು ಬಿಡುಗಡೆ ಹೊಂದಿ ಅದ್ದೂರಿ ಮೆರವಣಿಗೆಯಲ್ಲಿ ಜಯ ಜಯಕಾರಗಳೊಂದಿಗೆ ವಿಜಾಪುರಕ್ಕೆ ಆಗಮಿಸಿದರು. ಯರವಾಡ ಜೈಲಿನಿಂದ ಬಿಡುಗಡೆಯಾಗಿ ಬಂದಾಗ ಕರ್ನಾಟಕ ವೈಭವ ಪತ್ರಿಕೆಯ ಪ್ರತಿನಿಧಿ ಇವರನ್ನು ಸಂದರ್ಶಿಸಿದ.

ವೈದ್ಯ ಶಾಸ್ತ್ರದ ಉನ್ನತ ವ್ಯಾಸಂಗ ಮುಗಿಸಿ ಆಮೇರಿಕದಿಂದ ಮರಳಿದ್ದ ಡಾ॥ ನಾ.ಸು. ಹರ್ಡಿಕರ್ ಅವರು ರಾಷ್ಟ್ರೀಯ ಭಾವನೆಗಳಿಂದ ತೀವ್ರ ಪ್ರಭಾವಿತರಾದರು. ನಾಗಪುರ ಸೆರೆಮನೆಯಲ್ಲಿರುವಾಗ ಹಿಂದುಸ್ತಾನಿ ಸೇವಾದಳವನ್ನು ಪ್ರಾರಂಭಿಸಲು ನಿರ್ಧರಿಸಿದರು. ಇವರಿಗೂ ಹಾಗೂ ಶ್ರೀನಿವಾಸರಾಯರಿಗೂ ಸ್ನೇಹವಿತ್ತು, ಸಂಘಟನಾ ಚತುರರಾಗಿದ್ದ ಹರ್ಡಿಕರರನ್ನು ಕರ್ನಾಟಕದಲ್ಲಿ ನೆಲೆಯೂರಲು ಪ್ರೇರೇಪಿಸಿದರು.

ಶ್ರೀನಿವಾಸರಾಯರು ಅಖಿಲ ಭಾರತ ಸೇವಾದಳವನ್ನು ಪ್ರಾರಂಭಿಸಿ ಹುಬ್ಬಳ್ಳಿಯಲ್ಲಿ ಪ್ರಧಾನ ಕಛೇರಿ ಸ್ಥಳವನ್ನಾಗಿಸುವಲ್ಲಿ ಸಾಕಷ್ಟು ಪರಿಶ್ರಮವಹಿಸಿದರು. ಇಬ್ಬರೂ ಸೇರಿ ಸೇವಾದಳವನ್ನು ಸ್ಥಾಪಿಸಿ ಬೆಳೆಸಿದರು. ದೇಶದ ತುಂಬೆಲ್ಲ ಈ ಸಂಸ್ಥೆ ಇಲ್ಲದಿದ್ದರೆ ಅಸಹಕಾರ ಚಳುವಳಿ ಯಶಸ್ಸು ಸಾಧಿಸುತ್ತಿದ್ದಿಲ್ಲ ಅನ್ನುವಷ್ಟರ ಮನ್ನಣೆ ಗಳಿಸಿತ್ತು.

ರಾಷ್ಟ್ರದ ಮೂಲೆ ಮೂಲೆಯಲ್ಲೂ ರಾಷ್ಟ್ರೀಯ ಭಾವನೆ ಬಿತ್ತಿದರು. ಇದರ ಕಾರ್ಯಕರ್ತರು ಕಾಂಗ್ರೆಸ್ಸಿನ ತತ್ವ ಧೋರಣೆಗಳನ್ನು ಕಾರ್ಯ ರೂಪಕ್ಕೆ ತರುವವರೆ ಈ ಕಾರ್ಯಕರ್ತರು, ಭಾರತದಲ್ಲೆಡೆಯಿಂದಲೂ ಸ್ವಯಂ ಸೇವಕರು ಡಾ। ಹರ್ಡಿಕರ್ ಹಾಗೂ ಅವರ ಶಿಸ್ತಿನ ಅನುಯಾಯಿಗಳ ಕೈಕೆಳಗೆ ತರಬೇತಿ ಪಡೆಯುವುದಗೋಸ್ಕರ ಬರುತ್ತಿದ್ದರು.

ಬಾಗಲಕೋಟೆಯಲ್ಲಿ ಸೇವಾದಳ ತರಬೇತಿ ಕೇಂದ್ರವೊಂದನ್ನು ಪ್ರಾರಂಭಿಸಿದರು. ಇಲ್ಲಿ ಕಟ್ಟಡದ ಹೊಣೆಯನ್ನು ಶ್ರೀನಿವಾಸ ರಾಯರೇ ಹೊತ್ತರು, ಇವರೊಂದಿಗೆ ಬಾಗಲಕೋಟೆಯವರೇ ಆದ ಜೋರಾಪುರ ಗುರುರಾಯರು ಅದರ ಉಸ್ತುವಾರಿ ಜವಾಬ್ದಾರಿ ವಹಿಸಿಕೊಂಡರು. ಹಿಂದುಸ್ತಾನಿ ಸೇವಾದಳ ವ್ಯಾಯಾಮ ಮಂದಿರದ ಕಟ್ಟಡದ ಹಣ ಸಂಗ್ರಹಣೆಗಾಗಿ ರಂ.ರಾ. ದಿವಾಕರ, ನಾ.ಸು. ಹರ್ಡಿಕರ, ಶ್ರೀನಿವಾಸ ರಾವ್ ಕೌಜಲಗಿ ಅವರುಗಳು ಸಂಯುಕ್ತವಾಗಿ ದೇಶ ವ್ಯಾಪ್ತಿ ವಿನಂತಿ ಕೈಗೊಂಡರು. ಧನ ಸಂಗ್ರಹದ ಪೈಸೆ ಪೈಸೆ ಲೆಕ್ಕವನ್ನು ಶ್ರೀನಿವಾಸ ರಾಯರು ಇಟ್ಟಿದ್ದರು. ಕಟ್ಟಡ ಪೂರ್ಣಗೊಂಡಾಗ ಪಂಡಿತ ಜವಾಹರ ಲಾಲ ನೆಹರು ಅವರಿಂದ ಉದ್ಘಾಟನೆಯಾಯಿತು. ರಾಷ್ಟ್ರ ಧ್ವಜವನ್ನು ಏರಿಸುವ ಸಮಾರಂಭವು ಶ್ರೀನಿವಾಸ ರಾಯರಿಂದ ನಡೆದು ಸೇವಾದಳದವರು ಮಾಡಿದ ಕಾರ್ಯವನ್ನು ಕಟ್ಟಡದ ಇತಿಹಾಸವನ್ನು ಹೇಳಿದರು. ಗುರುರಾವ್ ಜೋರಾಪುರ್ ಅವರು ಸ್ವಯಂ ಸೇವಕರ ತರಬೇತಿ ಹಣಕಾಸಿನ ವ್ಯವಹಾರ ಲೆಕ್ಕಪತ್ರ ಕುರಿತು ವಿವರವಾಗಿ ಭಾಷಣಗೈದರು. ಕರ್ನಾಟಕ ಪ್ರಾಂತೀಯ 2ನೇ ಸಮಿತಿಗೆ ಶ್ರೀನಿವಾಸರಾಯರನ್ನು ವಿಜಾಪುರ ಜಿಲ್ಲಾ ಕಾಂಗ್ರೆಸ್ ಕಮಿಟಿಯ

ಸಭಾಸದರು ಜಿಲ್ಲೆಯ ಪರವಾಗಿ ಪ್ರತಿನಿಧಿಯನ್ನಾಗಿಸಿದರು.

1923 ಅಕ್ಟೋಬರ್ 22 ರಂದು ಮುಂಬೈ ಸಮಾರಂಭಕ್ಕೆ ಆಗಮಿಸಿದ ಮೌಲಾನಾ ಮಹಮ್ಮದ ಆಲಿ ಅವರಿಗೆ ಅಖಿಲ ಕರ್ನಾಟಕದ ವತಿಯಿಂದ ಶ್ರೀನಿವಾಸ ರಾಯರು ಪುಷ್ಪ ಹಾರ ಅರ್ಪಿಸಿ ಅದ್ಭುತವಾಗಿ ಭಾಷಣ ಮಾಡಿದರು.

ಬೆಳಗಾವಿಯಲ್ಲಿ 1924 ಡಿಸೆಂಬರ್ 26 ಹಾಗೂ 27 ರಂದು ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಜರುಗಿತು. ರಾಷ್ಟ್ರಮಟ್ಟದ ಮುಖಂಡರು ಆಗಮಿಸಿದ್ದರು. ಈ ಅಧಿವೇಶನ ಸೇರಲು ಶ್ರೀನಿವಾಸರಾಯರು ಸಾಕಷ್ಟು ಪರಿಶ್ರಮಿಸಿದುದಲ್ಲದೇ ಡಾ॥ ಹರ್ಡಿಕರರೊಂದಿಗೆ ಕೂಡಿ ಸುಮಾರು 1700 ರಷ್ಟು ಸೇವಾದಳ ಸ್ವಯಂಸೇವಕರನ್ನು ಕರ್ನಾಟಕವೊಂದರಲ್ಲಿ ತರಬೇತಿ ನೀಡಿ ಅಣಿಗೊಳಿಸಿದ್ದರು

ಈ ಸ್ವಯಂ ಸೇವಕರ ಅರ್ಪಣಾಭಾವ, ಶಿಸ್ತು, ದೇಶಾಭಿಮಾನವನ್ನು ಎಲ್ಲರೂ ಮೆಚ್ಚಿದ್ದರು. ಈ ಅಧಿವೇಶನದ ಉದ್ಘಾಟನಾ ಸಮಾರಂಭದ ದಿನವೇ ಶ್ರೀನಿವಾಸ ರಾಯರು ಉತ್ತೇಜಿತ ಭಾಷಣ ಮಾಡಿದರು. ಬೆಳಗಾವಿಯ ಕಾಂಗ್ರೆಸ್ಸಿನ ಅಧಿವೇಶನದ ಪ್ರಭಾವವು ಕರ್ನಾಟಕದ ಸ್ವಾತಂತ್ರ್ಯ ಚಳವಳಿ ಹಾಗೂ ರಾಷ್ಟ್ರೀಯ ಕಾರ್ಯಕರ್ತರ ಮೇಲೆ ಆಳವಾಗಿ ಆಯಿತು.

1928 ರ ಆಗಸ್ಟ್‌ನಲ್ಲಿ ಬಾಗಲಕೋಟೆಯಲ್ಲಿ ಕರ್ನಾಟಕ ರೈತ ಪರಿಷತ್ತು, ರಾಜಕೀಯ ಪರಿಷತ್ತು, ವರ್ತಕರ ಹಾಗೂ ಪತ್ರಿಕಾ ಪರಿಷತ್ತುಗಳು ಜರುಗಿದವು. ಇವೆಲ್ಲವುಗಳನ್ನು ಶ್ರೀನಿವಾಸರಾಯರು ಜೋರಾಪುರ ಗುರುರಾಯರು ವ್ಯವಸ್ಥೆ ಮಾಡಿದ್ದರು.

ಈ ಪರಿಷತ್ತುಗಳಿಗೆ ಅಧ್ಯಕ್ಷರಾಗಿ ನಾಡಿನ ದಿಗ್ಗಜರು ಬಂದಿದ್ದರು. ದೇಶಭಕ್ತ ಗಂಗಾಧರರಾವ್ ದೇಶಪಾಂಡೆ, ಜಮುನಾದಾಸ ಮಹಾ, ಡಿ.ವಿ.ಗುಂಡಪ್ಪ ಮುದುವೀಡು ಕೃಷ್ಣರಾಯರು ಶ್ರೀನಿವಾಸರಾಯ ಕೌಜಲಗಿ ವೇ.ಶಾ.ಸಂ.ಕುರ್ಮಾಚಾರ್ಯ ಗಲಗಲಿಯವರು ವಹಿಸಿದ್ದರು. ಸೈಮನ್ ಕಮಿಷನ್ನಿಗೆ ಧಿಕ್ಕಾರ ಹೇಳಿ ರಾಷ್ಟ್ರಾದ್ಯಂತ ಸಭೆ ಮೆರವಣಿಗೆಗಳು ನಡೆದವು. 1928 ಫೆಬ್ರುವರಿ 5ರ ಕರ್ನಾಟಕ ವೈಭವ ಪತ್ರಿಕೆಯಲ್ಲಿ ವಿಜಾಪುರದಲ್ಲಿಯ ಬಹಿಷ್ಕಾರದ ವರದಿಯನ್ನು ಈ ರೀತಿ ಬರೆದಿದೆ.

ಸೈಮನ್ ಕಮಿಷನ್ನಿಗೆ ಧಿಕ್ಕಾರ ಹೇಳಿ ಅಪೂರ್ವ ಹರತಾಳ ಆಚರಿಸಲ್ಪಟ್ಟಿತು. ರಾವಸಾಹೇಬ ಹಳಕಟ್ಟಿ ಶ್ರೀನಿವಾಸರಾಯ ಕೌಜಲಗಿ ಇವರು ಕಮೀಷನಕ್ಕೆ ಬಹಿಷ್ಕಾರ ಹಾಕಬೇಕೆಂಬ ವಿನಂತಿ ಪತ್ರ ಬರೆದು ಪ್ರಸಿದ್ಧಿ ಮಾಡಿದರು. ಬಹಿಷ್ಕಾರದ ಠರಾವು ಪಾಸಾಯಿತು. ಮಹಾತ್ಮಾ ಗಾಂಧೀಕಿ ಜೈ ಎಂಬ ಜಯಘೋಷ ಮೊಳಗಿತು. ಶ್ರೀನಿವಾಸರಾಯರು ಅರ್ಧತಾಸಿನವರೆಗೆ ಸ್ಫೂರ್ತಿದಾಯಕ ಮಾತನ್ನಾಡಿದರು. ಅಸಹಕಾರ ಆಂದೋಲನದ ಮುಂದಿನ ಮೆಟ್ಟಲಾಗಿ ಹನ್ನೆರಡನೆ ಮಾರ್ಚ್ 1930 ರಂದು ಕಾಯ್ದೆ ಭಂಗ ಚಳುವಳಿಯನ್ನು ಗಾಂಧೀಜಿಯವರು ಘೋಷಿಸಿದರು ದಿಲ್ಲಿಯಲ್ಲಿ ಸೇರಿದ್ದ ಅಖಿಲ ಭಾರತ ಕಾಂಗ್ರೆಸ್ ಕಮೀಟಿಯಂತೂ, ಈ ವರ್ಷದೊಳಗೆ ಸ್ವರಾಜ್ಯ ಪ್ರಾಪ್ತಿಯಾಗುತ್ತದೆ, ಎಂದು ಸಾರಿತು ಹೀಗಾಗಿ ಕರನಿರಾಕರಣೆ ಚಳುವಳಿ ಅಧಿಕಾರವನ್ನು ಪ್ರಾಂತಿಕ ಕಾಂಗ್ರೆಸ್ ಕಮೀಟಿಗಳಿಗೆ ವಹಿಸಿತು, ಈ ಚಳುವಳಿಯು ಕರ್ನಾಟಕದಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನು ಯಾವುದಾದರೊಂದು ಪ್ರತಿಭಟನೆಯಲ್ಲಿ ತೊಡಗಿಸಿ ಕ್ರಿಯಾಶೀಲರನ್ನಾಗಿ ಮಾಡಿತು.

ಗಾಂಧೀಜಿಯವರು ಐತಿಹಾಸಿಕ ದಂಡಿಯಾತ್ರೆ ಮಾಡಿ ಉಪ್ಪಿನ ಸತ್ಯಾಗ್ರಹ ಕೈಗೊಂಡರು, ಈ ಚಳುವಳಿ ಜೋರಾಯಿತು. ಸತ್ಯಾಗ್ರಹ ಕುರಿತು ಎಲ್ಲೆಡೆ ವಿಜ್ಞಾಪನೆ

ಸವಿನಯ ಕಾಯಿದೆ ಭಂಗದಿಂದ ಮುರಿಯಬೇಕು. ಶ್ರೀನಿವಾಸರಾಯರು ಜಿಲ್ಲೆಯ ತುಂಬೆಲ್ಲ ಸಂಚರಿಸಿ ಉಪ್ಪು ತಯಾರಿಸುವಂತೆ ಜನತೆಯನ್ನು ಹುರಿದುಂಬಿಸಿದರು. ಬಸನಾಳ ಗ್ರಾಮದಲ್ಲಿ ತಯಾರಿಸಲಾದ ಸುಂಕರಹಿತ ಉಪ್ಪನ್ನು ತಂದು 1930 ಎಪ್ರಿಲ್ 13 ರಂದು ಬಾಗಲಕೋಟೆಯಲ್ಲಿ ಮಾರಿ ಕಾಯಿದೆ ಮುರಿದರು. ಕೊತ್ತಲಪ್ಪನ ಗುಡಿಯೆದುರಿನ ಕಟ್ಟೆಯ ಮೇಲೆ ಸಾರ್ವಜನಿಕ ಸಭೆ ಇದರ ಸ್ವಯಂ ಸೇವಕರಾದ ಮಂಗಳವೆಡೆ ಶ್ರೀನಿವಾಸರಾಯರು, ಗುರುರಾಯ ಜೋರಾಪುರ್, ಕಣಬೂರು ವಕೀಲರು, ಹಣಮಂತರಾಯ ಮೊಹರೆ ಪ್ರಭಾವಿತವಾಗಿ ಭಾಷಣ ಮಾಡಿದ್ದರಿಂದ ಬಂಧಿತರಾಗಿ ಶಿಕ್ಷೆಗೊಳಗಾದರು. ಆದರೆ ಅಧ್ಯಕ್ಷತೆ ವಹಿಸಿದ್ದ ಶ್ರೀನಿವಾಸರಾವ್ ಕೌಜಲಗಿಯವರು ಮಾತ್ರ ಕಾಯಿದೆ ವ್ಯಾಪ್ತಿಗೆ ಸಿಗದಂತೆ ಭಾಷಣ ಗೈದು ಬಂಧಿತರಾಗದ ಜಾಣಾಕ್ಷರು.

ಕರ ನಿರಾಕರಣೆಯ ಚಳುವಳಿ ದೇಶದ ತುಂಬೆಲ್ಲಾ ಪಸರಿಸಿ ಉಗ್ರ ರೂಪ ತಾಳಿತು. ಹೆಚ್ಚೆಚ್ಚು ಜನ ಸ್ವಯಂ ಸೇವಕರು ಬಂಧನಕ್ಕೊಳಗಾದರು ಅಂತೆಯೇ ಗಾಂಧೀಜಿಯವರು ಪ್ರತಿ ಸಾರಿ ಜೈಲು ಯಾತ್ರೆ ಜನತೆಯ ಶಕ್ತಿಯನ್ನು ಉತ್ಸಾಹವನ್ನು ಹೆಚ್ಚಿಸುತ್ತದೆ ಅಲ್ಲದೇ ಅದು ಸ್ವರಾಜ್ಯದತ್ತ ಒಯ್ಯುತ್ತದೆ ಎಂದು ಜನತೆಯನ್ನು ಹುರಿದುಂಬಿಸಿದರು. ಗಾಂಧಿ ಇರ್ವಿನ್ ಒಪ್ಪಂದದ ಮೂಲಕ ಕಾಯ್ದೆ ಭಂಗ

1931 ಮಾರ್ಚ್ 8 ರಂದು ಒಪ್ಪಂದದ ಕುರಿತಾದ ಸಾರ್ವಜನಿಕ ಸಭೆಯು ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಸ್ವಲ್ಪ ಸಮಯ ಶಾಂತ ಪರಿಸ್ಥಿತಿ ತಲೆದೋರಿದರೂ ಪುನಃ ಕಾಯ್ದೆ ಭಂಗ ಕರನಿರಾಕರಣೆ ಆಂದೋಲನ ಪ್ರಾರಂಭಗೊಂಡಿತು. ಇಂತಹ ಪ್ರಕ್ಷುಬ್ಧ ಸ್ಥಿತಿಯಲ್ಲಿ ಲಾಹೋರದಲ್ಲಿ 1931 ರ ಮಾರ್ಚ್ 23 ಕ್ಕೆ ದೇಶಭಕ್ತ, ಭಗತ್ ಸಿಂಗ್, ರಾಜಗುರು, ಸುಖದೇವ್ ಇವರನ್ನು ಗಲ್ಲಿಗೇರಿಸಿದರು. ಹೆಣಗಳನ್ನು ಮೋಟಾರದಲ್ಲಿ ಹೇರಿಕೊಂಡು 60 ಮೈಲುಗಳ ದೂರದ ಸತ್ಲಜ್ ನದಿಯ ದಂಡೆಯ ಮೇಲೆ ಅಗ್ನಿ ಸಂಸ್ಕಾರ ಮಾಡಿದರು. ಅವರು ಸ್ವಾತಂತ್ರ್ಯಕ್ಕಾಗಿ ಪ್ರಾಣತೆತ್ತ ದೇಶಭಕ್ತರು, ವಿಜಾಪುರದಲ್ಲೂ ಹರತಾಳ ಆಚರಿಸಲ್ಪಟ್ಟಿತು. ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಮೌನ ಸಭೆ ಛತ್ರೇ ಥೇಟರ್‌ನಲ್ಲಿ ಜರುಗಿತು.

ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ಕರಾಚಿಯಲ್ಲಿ 1931 ರಲ್ಲಿ ಜರುಗಿತು. ಇದಕ್ಕೆ ಸರದಾರ ವಲ್ಲಭ ಭಾಯಿ ಪಟೇಲರು ಅಧ್ಯಕ್ಷರು, ಕರ್ನಾಟಕ ಕಾಂಗ್ರೆಸ್ ಕಮೀಟಿಯ ವತಿಯಿಂದ ಶ್ರೀನಿವಾಸ ರಾಯರು ಕರಾಚಿಗೆ ಹೋದರು. ಲಾಲ ಬಾಲ ಪಾಲ್ ತ್ರಿಮೂರ್ತಿಗಳಾಗಿದ್ದ ಲಾಲಾ ಲಜಪತರಾಯ್, ಬಾಲ ಗಂಗಾಧರ ಟಿಳಕ್, ಬಿಪಿನ್ ಚಂದ್ರಪಾಲ್ ಉಗ್ರ ಪಂಥದ ನಾಯಕರಾಗಿದ್ದರು. ಶ್ರೀನಿವಾಸ ರಾಯರು ಈ ಉಗ್ರಪಂಥಕ್ಕೆ ಸೇರಿದವರು. ವಲ್ಲಭ ಭಾಯಿ ಪಟೇಲರಂತೆ ಉಗ್ರ ಸ್ವಭಾವ ಹೋರಾಡಿಯೇ ಸ್ವಾತಂತ್ರ್ಯ ಗಳಿಸಬೇಕೆಂಬ ಉಗ್ರವಾದಿಗಳು ಕರಾಚಿಯ ಅಧಿವೇಶನ ಮುಗಿಸಿ ಬರುವಾಗ ಶ್ರೀನಿವಾಸ ರಾಯರ ಕಾಲಿಗೆ ಗಾಯವಾಗಿ ನಂಜಾಗಿ ಅಂದಿನಿಂದ ಅವರ ಆರೋಗ್ಯ ಕ್ಷೀಣವಾಗತೊಡಗಿತು.

1937ರಲ್ಲಿ ಪಾರ್ಶ್ವವಾಯುವಿನಿಂದ ಬಳಲ ತೊಡಗಿದರು. "ಕರ್ನಾಟಕ ಹುಲಿ" ದಣಿದು ಬಳಲಿತ್ತು. ಆದರೂ ದೇಶ ಸ್ವಾತಂತ್ರ್ಯದ ಕುರಿತು ತಮ್ಮ ಸ್ನೇಹಿತರೊಡನೆ ಸದಾ ಚರ್ಚಿಸುತ್ತಿದ್ದರು. ಉಜ್ವಲ ರಾಷ್ಟ್ರಪ್ರೇಮಿ. ಕಾಂಗ್ರೆಸ್ ಭಕ್ತ, ಕರ್ನಾಟಕಕ್ಕೆ ಭೂಷಣ ಪ್ರಾಯರು. ಇಂತಹ ಸ್ವಾತಂತ್ರ್ಯ ಪ್ರೇಮಿಗೆ ಸ್ವಾತಂತ್ರ್ಯ ಭಾರತವನ್ನು ಕಾಣುವ ಅವಕಾಶ ದೊರೆಯಲಿಲ್ಲ. ಮುಂದೆ ನಡೆದ ಸ್ವಾತಂತ್ರ್ಯದ ಕೊನೆಯ ಆಂದೋಲನ ಕ್ವಿಟ್ ಇಂಡಿಯಾ, ಬ್ರಿಟೀಷರೇ ಭಾರತ

ಬಿಟ್ಟು ತೊಲಗಿರಿ ಈ ಚಳುವಳಿಯಲ್ಲಿ ಭಾಗವಹಿಸುವ ಭಾಗ್ಯ ದೊರೆಯಲಿಲ್ಲ.

ಕಾಲಿನ ನಂಜು ದೇಹಕ್ಕೆ ಹೊಡೆದ ಪಾರ್ಶ್ವವಾಯುಗಳಿಂದ ಬಳಲಿದ ಶ್ರೀನಿವಾಸ ರಾಯರು 1940 ಫೆಬ್ರುವರಿ 22 ರಂದು ರಾತ್ರಿ 10 ಘಂಟೆಗೆ ವೈಕುಂಠವಾಸಿಗಳಾದರು. ದೇಶ ದುಃಖಿಸಿತು. ಶ್ರೀನಿವಾಸರಾಯರೆಂದರೆ ವಿಜಾಪುರ, ವಿಜಾಪುರವೆಂದರ ಶ್ರೀನಿವಾಸರಾಯರು ಎನ್ನುವಷ್ಟು ಎತ್ತರಕ್ಕೆ ಬೆಳೆದಿದ್ದರು. ಕಾಂಗ್ರೆಸ್ ಸಂಸ್ಥೆಯನ್ನು ಬೆಳೆಸಿದ್ದರು. " ಇಂತಹ ಕರ್ನಾಟಕ ಹುಲಿ ಇನ್ನೊಮ್ಮೆ ಹುಟ್ಟಲಿಕ್ಕಿಲ್ಲ " ಎಂದು ಅಂದಿನ ರಾಷ್ಟ್ರ ನೇತಾರರು ಉದ್ಗರಿಸಿದ್ದರು. ದೇಶಕ್ಕಾಗಿ ಸರ್ವ ತ್ಯಾಗ ಮಾಡಿದರು. ಅಂದಿನ ಕಾಂಗ್ರೆಸ್ಸಿಗರು ಇವರನ್ನು ಸದಾ ಮುಂದಿಟ್ಟುಕೊಂಡೇ ಕಾರ್ಯ ನಡೆಸಿದ್ದರು. ಈಗ ಅವರು ಹೇಳ ಹೆಸರಿಲ್ಲದವರಾಗಿದ್ದಾರೆ. ದೇಶಕ್ಕಾಗಿ ಎಲ್ಲಾ ಮಾಡಿದರೂ ಏನೂ ಮಾಡದವರಂತೆ ಜನಮನದಿಂದ ಮಾಸಿದ್ದಾರೆ.

**ಕರ್ನಾಟಕದ ಸರದಾರ ಪಟೇಲ್ ಚನ್ನಬಸಪ್ಪ, ಜಗದೇವಪ್ಪ ಅಂಬಲಿ:**

ವಿಜಾಪುರ ತಾಲೂಕಿನ ಅರ್ಜುಣಗಿ ಎಂಬ ಗ್ರಾಮದಲ್ಲಿ ಜಗದೇವಪ್ಪನವರ ಎರಡನೆಯ ಹೆಂಡತಿ ಕಾಳವ್ವನ ಉದರದಲ್ಲಿ ಮೂರನೆಯ ಮಗನಾಗಿ ಚನ್ನಬಸಪ್ಪ 05–011895 ರಂದು ಜನಿಸಿದರು. ರೈತ ಕುಟುಂಬದವರಾದ ಈ ಮನೆತನದವರು ತಮ್ಮ ಒಕ್ಕಲುತನದಿಂದ ಬಂದ ಆದಾಯದಲ್ಲಿ ಎಳ್ಳಷ್ಟೂ ಕೂಡ ಹಾಕದೆ ಅದನ್ನು ಹಸಿದು ಬಂದವರಿಗೆ ಅಂಬಲಿ ಮಾಡಿ ಉಣಿಸಿ ತೃಪ್ತಿ ಮಾಡಿ ಕಳಿಸುತ್ತಿದ್ದ ಈ ಮನೆತನದವರು ಅಂಬಲಿ ಎಂದು ಪರಿಚಿತರಾದರು. ಚನ್ನಬಸಪ್ಪನವರು ಚಿಕ್ಕವರಿದ್ದಾಗಲೇ ಬಹಳ ತುಂಟರಾಗಿದ್ದು ಇವರ ಶಿಕ್ಷಣ ಕೇವಲ ಕನ್ನಡ ನಾಲ್ಕನೇ ಇಯತ್ತೆಯವರೆಗೆ ಆಯಿತು. ಬಾಲ್ಯದಲ್ಲಿಯೇ ತಂದೆಯವರು ತೀರಿಕೊಂಡರು. ಆನಂತರ ಒಕ್ಕಲುತನದ ಭಾರವೆಲ್ಲ ಇವರ ತಲೆಯ ಮೇಲೆ ಬಿದ್ದಿತು. ಒಕ್ಕಲುತನದಲ್ಲಿ ನುರಿತವರಾಗಿ ಒಳ್ಳೆಯ ಗಳಿಕೆಯನ್ನು ಮಾಡಿ ಅದನ್ನು ವಿದ್ಯಾರ್ಥಿಗಳ ಹಿತಕ್ಕಾಗಿ ಮತ್ತು ಬಡವರ ಹಿತಕ್ಕಾಗಿ ವ್ಯಯಮಾಡುತ್ತಿದ್ದರು. 1914 ರಲ್ಲಿ ಒಂದನೇ ಮಹಾಯುದ್ಧ ಪ್ರಾರಂಭವಾಗಲು ಯುದ್ಧ ವಿರೋಧಿ ಚಳವಳಿಗಳನ್ನು ತಮ್ಮ ಗ್ರಾಮದಲ್ಲಿ ಪ್ರಾರಂಭಿಸಿದರು. ಸೇನೆಗೆ ಭರ್ತಿ ಮತ್ತು ಯುದ್ಧ ನಿಧಿ ಎತ್ತಲಿಕ್ಕೆ ಬಂದ ಮಾಮಲೇದಾರರಿಗೂ ಇವರಿಗೂ ಮಾತಿನ ಚಕಮಕಿಯಾಯಿತು. ಮಾಮಲೆದಾರರು ಇವರನ್ನು ಮೂರು ದಿವಸ ಅರ್ಜುನಗಿ ಚಾವಡಿಯಲ್ಲಿ ಬಂಧನದಲ್ಲಿರಿಸಿದರು ಉಪವಾಸ ಕೆಡವಿಟ್ಟಿದ್ದರು. ಇವರ ವಿಚಾರಗಳು ಊರ ಜನರಿಗೆ ಸರಿಕಂಡು ಎಲ್ಲರಿಗೂ ದೇಶ ಸೇವೆ ಮಾಡಬೇಕೆಂದು ಲವಲವಿಕೆಯಾಯಿತು.

ಮಹಾತ್ಮಾ ಗಾಂದಿಜಿಯವರು ಅಹಮದಾಬಾದಿನಲ್ಲಿ ಚಂಪಾರಣ್ಯ ಅಹಮದಾಬಾದಿನಲ್ಲಿ ಸತ್ಯಾಗ್ರಹ ಹೂಡಿದಾಗ ದಿ॥ ಅಂಬಲಿಯವರು ಒಂದು ಸಂಘ ಕಟ್ಟಿ ಭೂ ಕಂದಾಯ ವಸೂಲಿಯನ್ನು (ವಿಜಾಪುರ ಪ್ರಸಿದ್ಧ ವಕೀಲರಾದ ಶ್ರೀನಿವಾಸರಾವ್ ಕೌಜಲಗಿಯವರ ಹಿರಿತನದಲ್ಲಿ ) ನಿರಾಕರಿಸುವ ಪ್ರಯತ್ನ ಮಾಡಿ ಹೆಸರು ಗಳಿಸಿದರು. 1919 ರಲ್ಲಿ ಜಲಿಯನ್ ವಾಲಾಬಾಗದ ಹತ್ಯಾಕಾಂಡ ನಡೆದಾಗ ಚಳವಳಿಯಲ್ಲಿ ಭಾಗವಹಿಸುವ ದೃಢ ಮನಸ್ಸು ಅವರಿಗೆ ಆಯಿತು. ಆಗ ಒಕ್ಕಲುತನದ ಕಡೆಗೆ ಇವರ ಮನಸ್ಸು ಉಳಿಯಲಿಲ್ಲ. ಅಸಹಕಾರ ಚಳವಳಿಯಲ್ಲಿ ಇವರ ತಾಯಿಗೆ ಕಾಯಿಲೆ ಇದ್ದರೂ ಲೆಕ್ಕಿಸದೇ ಭಾಗವಹಿಸಿದರು. ಅವರು ವಿಜಾಪುರ ಜೈಲಿನಲ್ಲಿ ನಾಲ್ಕು ತಿಂಗಳ ಕಠಿಣ ಕಾರಾಗ್ರಹ ವಾಸವನ್ನು ಅನುಭವಿಸಿದರು. ಆಗ ಜೈಲಿನಲ್ಲಿ ಇವರಿಗೆ ಏಟು ಹೊಡಿದರು. ಪೋಲಿಸರು ಚಾಬೂಕಿನಿಂದ ಬಡಿದು ಇವರನ್ನು ಹಣ್ಣು ಮಾಡಿದರು.

ಕಾಯ್ದೆ ಭಂಗ ಚಳುವಳಿಯಲ್ಲಿಯೂ (1930) ಇವರಿಗೆ ಶಿಕ್ಷೆಯಾಗಿ ವಿಜಾಪುರ ಜಿಲ್ಲಾ ಜೈಲಿನಲ್ಲಿ 9 ತಿಂಗಳ ಕಠಿಣ ಶಿಕ್ಷೆ ಅನುಭವಿಸುವಾಗ ಧಾನ್ಯ ಬೀಸುವದು ಇವರ ಪಾಲಿಗೆ ಬಂದಿತ್ತು. ಈ ಪ್ರಸಂಗದಲ್ಲಿ ಜೈಲರರಿಗೂ ಇವರಿಗೂ ತಿಕ್ಕಾಟವಾಗಿ ಜೈಲರ್ ಸಾಹೇಬನು ಇವರನ್ನು ವಿಜಾಪುರ ಜೈಲನ್ನು ಬಿಡಿಸಿ ವಿಸಾಪುರ್ ಸೆಂಟ್ರಲ್ ಪ್ರಿಸನ್‌ಗೆ ಸ್ಥಳಾಂತರಿಸಿದರು. ವಿಸಾಪುರ್ ಸುಪರಿಂಟೆಂಡೆಂಟ್‌ರಿಗೂ ಇವರಿಗೂ ಸರಿ ಬೀಳದ್ದರಿಂದ ಇವರನ್ನು 15 ದಿವಸ ತಗಣಿ, ಚಿಕ್ಕಾಡು ಇರುವ ಕತ್ತಲಕೋಣೆಯಲ್ಲಿ ಬರಿ ಬತ್ತಲೆ ಇಟ್ಟಿದ್ದರು. ಆಗ ಕಾಯಿಲೆಯಾಗಿ, ಬಿಡುಗಡೆಯಾದನಂತರ ನಾಲ್ಕು ತಿಂಗಳು ವಿಶ್ರಾಂತಿ ಪಡೆಯಬೇಕಾಯಿತು.

ಚನ್ನಬಸಪ್ಪನವರ ನೇತೃತ್ವದಲ್ಲಿ ಇವರ ಮನೆತನವೇ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿತು. ವಿಜಾಪುರ ಜಿಲ್ಲಾ ಪೊಲೀಸರು ಅಂಬಲಿ ಮನೆತನದ ಮೇಲೆ ಕಣ್ಣಿಟ್ಟು ಬಹಳ ಗೋಳಾಡಿಸಹತ್ತಿದರು. ಇದರಿಂದ ನಾಲ್ಕು ಜನ ಸಹೋದರರ ಹೆಂಡರು ಮಕ್ಕಳನ್ನು ಕಟ್ಟಿಕೊಂಡ ಇವರು ವಿಜಾಪುರ ಬಿಟ್ಟು ಸೊಲ್ಲಾಪುರ ಸೇರಬೇಕಾಯಿತು. ತೀವ್ರ ಚಿಂತೆಯಾಗಿ ಇವರ ತಾಯಿ ಮೃತಪಟ್ಟಳು, ಹೊಟ್ಟೆಯ ಪಾಡಿಗಾಗಿ ಎಲ್ಲರೂ ಸೊಲ್ಲಾಪುರದಲ್ಲಿ ನೌಕರಿ ಮಾಡಬೇಕಾಯಿತು. ಅಲ್ಲಿಯೂ ಭಾರತ ಮಾತೆಯ ವಿಮೋಚನೆಯ ಹಂಬಲವು ಬಲವಾಗಿ. ಇವರು ಇವರ ಕಿರಿಯ ತಮ್ಮ ಅಡಿವೆಪ್ಪ ಅಂಬಲಿಯವರು ಕಾಯ್ದೆಭಂಗ ಚಳುವಳಿಯಲ್ಲಿ ಭಾಗವಹಿಸಿದರು. ಸಿಂದಿ, ಸೆರೆಗಳ ಅಂಗಡಿಗಳ ಮುಂದೆ ಪಿಕೇಟಿಂಗ್ ಮಾಡುವದನ್ನು ಇಬ್ಬರು ಸಹೋದರರು ಪ್ರಾರಂಭಿಸಿದರು. ಅಲ್ಲಿಯೂ ಮಾರ್ಷಲ್ ಲಾ ದುರಂತದ ಪೆಟ್ಟಿಗೆ ಸಿಕ್ಕು ಹಣ್ಣಾದರು. ಸೊಲ್ಲಾಪುರದ ಮಾರ್ಷಲ್ ಲಾ ಕಾಲಕ್ಕೆ ಇವರು ಇವರ ಸಹೋದರರ ಸಹಿತ ಕುಟುಂಬ, ಆ ಊರು ಬಿಟ್ಟು ಪಾರಾಗಿ ಬರಬೇಕಾದರೆ ಸಾಕುಬೇಕಾಯಿತು. ವೇಷ ಬದಲಾಯಿಸಿ ತಪ್ಪು ಹೆಸರಿಟ್ಟುಕೊಂಡು ಮಹೋಳ ಸ್ಟೇಷನ್‌ಗೆ ಹೋಗಿ ಅಲ್ಲಿಂದ ಟಿಕೇಟ್ ತೆಗೆಸಿ ವಿಜಾಪುರ ಸ್ಟೇಶನ್ ಬರುವವರೆಗೆ ಸಾಕುಸಾಕಾಯಿತು. ಇವರ ಮನೆಯವರು ಆ ಗಾಡಿಯಲ್ಲಿ ಸೀಟುಗಳ ಫಳಿಯ ಬುಡು ಇವರನ್ನು ಇವರ ತಮ್ಮ ಆಡಿವೆಪ್ಪನನ್ನು ಮಲಗಿಸಿ ಇವರುಗಳು ಕಾಣದಂತೆ ಸಾಮಾನುಗಳನ್ನಿಟ್ಟು ಕಾಲು ಜೋತುಬಿಟ್ಟು ಕುಳಿತಿದ್ದರು. ಪ್ರತಿ ಸ್ಟೇಷನ್ನಲ್ಲಿ ಪೋಲೀಸರು ಡಬ್ಬಿಗಳ ಒಳಹೊಕ್ಕು ಚೆನ್ನಬಸ್ಯಾ, ಆಡಿವ್ಯಾ ಅಂಬಲಿ ತದಿಕರು ಎಲ್ಲಿದ್ದಾರೆ? ಎಂದು ಪ್ಯಾಸಿಂಜರರನ್ನು ಕೇಳುತ್ತಿದ್ದರು. ಮತ್ತೆ ಸ್ವಂತ ಊರಿಗೆ ಬಂದು ನೆಲಸಿದ್ದಾಯಿತು.

1930–33 ರ ಸಾರ್ವತ್ರಿಕ ಕಾಯ್ದೆ ಭಂಗ ಚಳುವಳಿಯಲ್ಲಿ ಇವರು ಬಿಜಾಪುರದಲ್ಲಿ ಮುಖ್ಯ ಪಾತ್ರ ವಹಿಸಿದ್ದರು. ಈ ಸಮಯಗಳಲ್ಲಿ ಒಮ್ಮೆ ಇವರಿಗೆ 3 ವರ್ಷ 6 ತಿಂಗಳು ಕಠಿಣ ಶಿಕ್ಷೆಯಾಗಿ ವಿಸಾಪುರ ಜೈಲಿಗೆ ಕಳುಹಿಸಿದರು. ಮತ್ತೊಮ್ಮೆ ಅನಾಮತ ಖೈದಿಯೆಂದು ವಿಜಾಪುರದಲ್ಲಿ ಇಟ್ಟಿದ್ದರು. ಇವರ ಘಟ್ಟಿತನವು ಎಲ್ಲರನ್ನು ಬೆರಗುಗೊಳಿಸಿತು. ಇವರ ಸಂಗಡ ಇವರ ಇಬ್ಬರು ಪತ್ನಿಯರು ರಾಮವ್ವ, ಗಂಗೂಬಾಯಿ ಮತ್ತು ಇವರ ತಮ್ಮ ಅಡಿವೆಪ್ಪ ಸ್ವಾತಂತ್ರ್ಯ ಚಳವಳಿಯಲ್ಲಿ ಹೋರಾಡಿ ಶಿಕ್ಷೆಗೆ ಒಳಗಾದರು. ರಾಮವ್ವ ಅವರಿಗೆ 1 ವರ್ಷ ಮತ್ತು ಗಂಗೂಬಾಯಿಯವರಿಗೆ 1 ವರ್ಷ 8 ತಿಂಗಳು ಕಠಿಣ ಶಿಕ್ಷೆಯಾಗಿ ಯರವಾಡಾ ಜೈಲಿನಲ್ಲಿ ಶಿಕ್ಷೆ ಅನುಭವಿಸಿದರು. ಇವರ ತಮ್ಮ ಅಡಿವೆಪ್ಪನ್ನು ಡಿಟೆನೂ ಆಗಿ ಇಟ್ಟಿದ್ದರು. ಚನ್ನಬಸಪ್ಪನವರ ಶಿಕ್ಷಣ ಕಡಿಮೆಯಿದ್ದರೂ ಜೈಲಿನಲ್ಲಿದ್ದಾಗ ಹಿಂದಿ ಮತ್ತು ಇಂಗ್ಲಿಷದ ಪೂರ್ಣ ಜ್ಞಾನ ಮಾಡಿಕೊಂಡಿದ್ದರು. ಇವರ ತಮ್ಮ ಅಡಿವೆಪ್ಪನೇ ಇವರಿಗೆ ಶಿಕ್ಷಕನಾಗಿದ್ದ, ಇವರಿಗೆ ಕನ್ನಡ, ಹಿಂದಿ ಮತ್ತು ಮರಾಠಿ ಭಾಷೆಗಳ ಪೂರ್ಣ ಜ್ಞಾನವಿತ್ತು ಹಿಂದಿ ಅವರಿಗೆ ನೆಚ್ಚಿನ ಭಾಷೆ. ಸೋಲ್ಲಾಪುರದಲ್ಲಿ ಇವರು ಸಾರ್ವಜನಿಕ ಸಭೆಗಳಲ್ಲಿ ಸ್ವಚ್ಛವಾಗಿ ಹಿಂದಿಯಲ್ಲಿ

ಭಾಷಣ ಮಾಡಿದ್ದುಂಟು. ವೈಯಕ್ತಿಕ ಸತ್ಯಾಗ್ರಹ ಕಾಲಕ್ಕೆ ಧಾರವಾಡ ಜಿಲ್ಲೆಯ ಗರಗ ಗ್ರಾಮದಲ್ಲಿ ಸತ್ಯಾಗ್ರಹ ಮಾಡಿ ಸೆರೆಮನೆ ಸೇರಿದರು.

ಕೆ.ಪಿ. ಸಿ.ಯ ಸೆಕ್ರೆಟರಿಯಾದಾಗ ( 1940) ಧಾರವಾಡ ಹುಬ್ಬಳ್ಳಿ ಶಹರಗಳಲ್ಲಿಯೇ ಇವರು ಹೆಚ್ಚಾಗಿ ಇರತೊಡಗಿದರು. 1942 ರಲ್ಲಿ ಅಂಬಲಿಯವರು ಕರ್ನಾಟಕದ ವಿಜಾಪುರ, ಹುಬ್ಬಳ್ಳಿ, ಮಹಾರಾಷ್ಟ್ರದ ಸೋಲ್ಲಾಪುರ ಹೀಗೆ ಮುಖ್ಯವಾಗಿ ಮೂರು ಕೇಂದ್ರಗಳಲ್ಲಿ ಭೂಗತರಾಗಿ ಜೀವದ ಭಯವಿಲ್ಲದೇ ದುಡಿದರು. ಕೆ.ಪಿ.ಸಿ.ಸಿ ನೇಮಿಸಿದ್ದ ಚಲೇ ಜಾವ್ ಸಮಿತಿಯ ಅಧ್ಯಕ್ಷರಾಗಿದ್ದರು. ಈ ಸಮಯದಲ್ಲಿ ಇವರನ್ನು ಮತ್ತು ಇವರ ಸಂಗಡ ಭೂಗತರಾಗಿ ಕೆಲಸ ಮಾಡುತ್ತಿದ್ದ ಅಡಿವೆಪ್ಪನವರನ್ನು ಕರಮರ್ಕರರನ್ನು ದಿವಾಕರರನ್ನು ಹಿಡಿದುಕೊಡಲು ತಲಾ 5 ಸಾವಿರ ರೂ ಬಕ್ಷೀಸು ಕೊಡುವ ಹುಕುಂ ಅನ್ನು ಜಿಲ್ಲೆ ಜಿಲ್ಲೆಗಳಲ್ಲಿ ಡಂಗುರಹೊಡೆಸಿ ಸರಕಾರ ಜಾಹೀರುಪಡಿಸಿತ್ತು.

ದಿ॥ ಅಂಬಲಿಯವರು ಸ್ವತಃ ನೇತೃತ್ವವಹಿಸಿ ವಿಧ್ವಂಸಕ ಕೃತ್ಯ ನಡೆಸಿದರು. ಕಛೇರಿ ಕಾಗದಗಳನ್ನು ಮತ್ತು ಟಪಾಲುಗಳನ್ನು ಸುಡುವದು ಜುಮನಾಳ, ಮಿಂಚನಾಳ ಸ್ಟೇಷನ್ಗಳನ್ನು ತಾವೇ ಭಾಗವಹಿಸಿ ಸುಟ್ಟರು. ಇದಲ್ಲದೇ ಮುಂಬೈ ಬಂದರಿನಿಂದ ಬಂಗಾರ, ಅಕ್ಕಿ ಮತ್ತು ಗೋಧಿ ಹೇರಿಕೊಂಡು ಇಂಗ್ಲೆಂಡಿಗೆ ಹೋಗತ್ತಿರುವ ಹಡಗನ್ನು ತಡೆದು ಟಾರ್ಪೆಡೋ ಹಚ್ಚಿ ಹಡಗು ಒಡೆದ ಪ್ರಾಶಸ್ತ್ರ ಇವರಿಗೆ ಇದೆ. ಮುಂದೆ ಮಹಾತ್ಮರ ಆದೇಶದಂತೆ ತೆರೆಮರೆಯಲ್ಲಿದ್ದ ಸತ್ಯಾಗ್ರಹಿಗಳು ಪೋಲಿಸ್ ಸ್ಟೇಷನ್‌ಗಳಿಗೆ ಹಾಜರಾದರು. ಅದರಂತೆ ದಿ ಅಂಬಲಿಯವರು ಮತ್ತು ಅವರ ತಮ್ಮ ಅಡಿವೆಪ್ಪನವರು ವಿಜಾಪುರ ಪೋಲಿಸ್ ಸ್ಟೇಷನ್‌ಗೆ ಹಾಜರ ಆದರು. ಕೆಲವು ದಿವಸ ಅಂಬಲಿಯವರು ವಿಜಾಪುರ ಜೈಲಿನಲ್ಲಿ ಅಂಡರ್ ಟ್ರಯಲ್ ಪ್ರಿಸನರ್‌ರಾಗಿ ಉಳಿದು ಬಿಡುಗಡೆ ಹೊಂದಿದರು.

ಇವರು 1942 ರಲ್ಲಿ ಮಾಡಿದ ಸಾಹಸಗಳು ಎಲ್ಲರೂ ಬೊಟ್ಟು ಕಚ್ಚಿಕೊಳ್ಳುವಂತವು. ಮುಂದೆ 1955 ರಲ್ಲಿ ಮಾನ್ಯ ನಿಜಲಿಂಗಪ್ಪನವರನ್ನು ಸೋಲಿಸಿ ಇವರು ಕೆ.ಪಿ.ಸಿ.ಸಿ ಪ್ರೆಸಿಡೆಂಟರಾಗಿ ಆರಿಸಿಬಂದರು. ಒಮ್ಮೆ ಇಲಕಲ್ (ಬಾಗಲಕೋಟ) ಮತದಾರರ ಸಂಘದಿಂದ ಕಂಠಿ ಸಾಹೇಬರ ಜೊತೆಯಲ್ಲಿ ಬಹುಮತದಿಂದ ಎಂ.ಎಲ್.ಎ ಆಗಿ ಆರಿಸಿಬಂದರು. ಮುಂದೆ ಇವರು ತಮ್ಮ ಸ್ವಂತ ಮತ ಕ್ಷೇತ್ರ ತಿಕೋಟಾದ ಎಂ.ಎಲ್.ಎ ಆಗಿ ಆರಿಸಿ ಬಂದರು (1957).

ಸುಮಾರು 01/03/1962 ರಲ್ಲಿ ಪಾರ್ಶ್ವವಾಯು ಪೀಡಿತದಿಂದ ತೀರಿಕೊಂಡರು. ಸುಂದರವಾದ ಗದ್ದುಗೆ ರೂಪದ ಸ್ಮಾರಕವನ್ನು ಇವರ ಹುಟ್ಟೂರಾದ ಅರ್ಜುನಗಿಯಲ್ಲಿ ವಿಜಾಪುರ ಜಮಖಂಡಿ ರಾಜಮಾರ್ಗದ ಸನಿಹದಲ್ಲಿ ಕಟ್ಟಿಸಿದ್ದು ಪ್ರತಿವರ್ಷ ಅವರ ಪುಣ್ಯ ತಿಥಿಯನ್ನು ಅವರ ಊರ ಜನರು ಬಹಳ ವಿಜೃಂಭಣೆಯಿಂದ ನೇರವೇರಿಸುವರು, ಬಡವರ ಉದ್ಧಾರ, ಅಸ್ಪೃಶ್ಯತಾ ನಿವಾರಣೆ ಇವುಗಳ ಕಡೆಗೆ ಇವರ ಮನಸ್ಸು ಸದಾ ಎಳೆಯುತ್ತಿತ್ತು. ಪ್ರಾಂತ ಪುನರ್ ನಿರ್ಮಾಣ ಕಾಲದಲ್ಲಿ ಇವರು ಕೆ.ಪಿ.ಸಿ ಪ್ರೆಸಿಡೆಂಟರಾಗಿದ್ದರು. ಪ್ರಾಂತ ಪುನರ್ ಸಂಘಟನೆಗಾಗಿ ಕರ್ನಾಟಕದ ಏಕೀಕರಣಕ್ಕಾಗಿ ಬಹಳ ದುಡಿದರು. ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರಿಡಬೇಕೆಂಬ ಹಂಬಲದಿಂದ ಇವರು ಜೀವ ಬಿಟ್ಟರು.

**ಉಪಸಂಹಾರ:**

ಸ್ವಾತಂತ್ರ್ಯವು ಪ್ರತಿಯೊಬ್ಬ ಮಾನವನ ಹಾಗೂ ಪ್ರತಿಯೊಂದು ರಾಷ್ಟ್ರದ ಜನ್ಮಸಿದ್ಧ ಅಧಿಕಾರವಾಗಿದೆ. ಒಂದು ರಾಷ್ಟ್ರದ ಸ್ವಾತಂತ್ರ್ಯವನ್ನು ಮತ್ತೊಂದು ರಾಷ್ಟ್ರವು ಅಪಹರಿಸಿ ಆ

ರಾಷ್ಟ್ರದ ಹಾಗೂ ಅದರ ಪ್ರಜೆಗಳ ಮೇಲೆ ನಿರಂಕುಶ ರಾಜ್ಯಾಡಳಿತವನ್ನು ಹೇರುವುದು ನಾಗರಿಕರೆಂದೆನಿಸಿಕೊಂಡ ಯಾವುದೇ ರಾಷ್ಟ್ರಕ್ಕೆ ಶೋಭಿಸದು. ತಮ್ಮ ವರ್ಚಸ್ಸು ಬೆಳೆಯಬೇಕು, ತಮ್ಮ ಅಂಕಿತದಲ್ಲಿ ಜಗತ್ತು ಮುಂದೆ ಸಾಗಬೇಕು, ತಾವು ಮಾಡಿದ ನಿಯಮ ನಿರ್ಬಂಧನಗಳೇ ವೇದವಾಕ್ಯವೆಂದು ಜಗತ್ತು ಪಾಲಿಸಬೇಕು ಎಂಬ ಸಿದ್ಧಾಂತವನ್ನು ಹೊಂದಿದ್ದ ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ನೀತಿಯ ಫಲವಾಗಿ ಭಾರತದೇಶ ಹಾಗೂ ಭಾರತೀಯರು ಸ್ವಾತಂತ್ರ್ಯ ಪಡೆಯಲು ಹಲವಾರು ದಶಕಗಳಿಂದ ಪರಿಶ್ರಮಿಸಿದ ಭಾರತೀಯರ ಒಗ್ಗೂಡಿದ ಪ್ರಯತ್ನಗಳ ಫಲವಾಗಿ ಸ್ವಾತಂತ್ರ್ಯ ದೊರಕಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದು ಐತಿಹಾಸಿಕ ಘಟನೆ.

ಹೀಗೆ ಅರಣ್ಯ ಸತ್ಯಾಗ್ರಹ, ವೈಯಕ್ತಿಕ ಸತ್ಯಾಗ್ರಹ, ಚಲೇಜಾವ್ ಚಳುವಳಿಯಲ್ಲಿ ಭಾಗವಹಿಸಿ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿಜಾಪುರ ತಾಲೂಕಿನ ಶ್ರೀನಿವಾಸರಾವ್ ಕೌಜಲಗಿ, ಕಾಕಾ ಕಾರಖಾನೀಸ, ಇನ್ನೂ ಸಹಸ್ರಾರು ದೇಶಭಕ್ತರು ತಮ್ಮ ಪ್ರಾಣ ಕಳೆದುಕೊಂಡರೆ ಲಕ್ಷಾಂತರ ಜನರು ಸೆರೆಮನೆವಾಸ ಅನುಭವಿಸಿದವರು, ಬ್ರಿಟಿಷ್‌ರ ಸಂಕೋಲೆಗಳಿಂದ ಭಾರತಾಂಬೆಯನ್ನು ವಿಮೋಚನೆಗೊಳಸಿದರು, ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ವಿಜಾಪುರ ಜಿಲ್ಲೆ ತಾಲೂಕು ತನ್ನದೇ ಆದ ವಿಶಿಷ್ಟ ಸ್ಥಾನ ಪಡೆದುಕೊಂಡಿದೆ. ಪರಕೀಯರ ದಬ್ಬಾಳಿಕೆ ವಿರುದ್ಧ ದನಿಯೆತ್ತಿ ಹೋರಾಡಿದ ವಿಜಾಪುರ 'ಗಂಡು ಮೆಟ್ಟಿನ ಭೂಮಿ' ಎಂದು ಹೆಸರು ಪಡೆದಿದೆ.

**ಪರಾಮರ್ಶನ ಗ್ರಂಥಗಳು:**


1. ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳುಸೂರ್ಯನಾಥ ಕಾಮತ ಮೈಸೂರು 197480
2. ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳುಎನ್.ಪಿ.ಶಂಕರನಾರಾಯಣರಾವ್ಬೆಂಗಳೂರು1991
3. ಕರ್ನಾಟಕ ಗ್ಯಾಜಿಟಿಯರ್, ವಿಜಾಪುರ ಜಿಲ್ಲೆ ಸೂರ್ಯನಾಥ ಕಾಮತ
4. ಕರ್ನಾಟಕ ಭೂಷಣ ಕೌಜಲಗಿ ಶ್ರೀನಿವಾಸರಾವ್ ಹಣಮಂತ ತಾಸಗಾಂವಕರ್
5. ಕರ್ನಾಟಕ ವೈಭವ: ಕಾಲು ಶತಮಾನ ಕಂಡ ಕರ್ನಾಟಕ ಪ್ರತಿಕೆಗಳುಕರ್ನಾಟಕ ಪತ್ರಿಕೆ ಅಕಾಡಮಿ ಬೆಂಗಳೂರು1990 –ಕೃಷ್ಣಕುಮಾರ್
6. ದೇಶಭಕ್ತ ಶ್ರೀನಿವಾಸರಾಯರು ಕೌಜಲಗಿ ಐ.ಬಿ.ಎಚ್. ಪ್ರಕಾಶನ ಬೆಂಗಳೂರು1977 ಸದಾನಂದ ಕನವಳ್ಳಿ



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.